


# ನೋಡಲು ಬಾರೆ ಈ ಜಲಧಾರೆ

ಇಳಿದು ಬಾ ತಾಯೇ... ಎಂದು ಬುವಿಯೆಲ್ಲ ಹಸುರುಟ್ಟು ಕರೆಯುವಾಗ, ಜಲಧಾರೆ ಧುಮ್ಮಿಕ್ಕಿ ಬಾರದೇ ಇರಲು ಸಾಧ್ಯವೆ? ಉತ್ತರ ಕನ್ನಡ, ಬೆಳಗಾವಿ, ಮೈಸೂರು, ಕೊಡಗು, ಚಾಮರಾಜನಗರ ಜಿಲ್ಲೆಗಳ ಜಲಪಾತಗಳು, ಜೋಗದ ಬಳುಕನ್ನೂ ಸೇರಿ ಬೆಳಕು ಚೆಲ್ಲುವ ಯತ್ನ ಈ ವಾರ ‘ಸುಧಾ’ದಲ್ಲಿ ಆಗಿದೆ. ಪ್ರತಿ ಜಿಲ್ಲೆಯಲ್ಲಿಯೂ ಮಳೆಗಾಲದ ಜಲಪಾತಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಬಿಸಿಲುಧರೆ ಎನಿಸಿರುವ ಕಲಬುರಗಿ ಜಿಲ್ಲೆಯ ಎತ್ತಿಪೋತ ಜಲಪಾತವಾಗಿರಬಹುದು, ಬಾಗಲಕೋಟೆ ಜಿಲ್ಲೆಯಲ್ಲಿರುವ ಜಲಪಾತಗಳಿರಬಹುದು ಜನರನ್ನು ಕೈಬೀಸಿ ಕರೆಯುತ್ತವೆ. ನದಿಗಳಿಂದ ಮೈದುಂಬಿ, ನೋಡು ಬಾರೆ ಈ ಜಲಧಾರೆ ಎಂದು ಕರೆಯುವ ಸೌಂದರ್ಯವತಿಯರಿಲ್ಲಿ, ಪದಗಳಲ್ಲಿ, ಚಿತ್ರಗಳಲ್ಲಿ ಸೆರೆಯಾಗಿದ್ದಾರೆ.

ಗಣಪತಿ ಹೆಗಡೆ | ಸಂತೋಷ ಈ. ಚಿನಗುಡಿ | ಎಂ. ಮಹೇಶ್